# 'ಚೌಕೀದಾರ್ ಚೋರ್' ಸುಳ್ಳು ಹೇಳಿಕೆ: ರಾಹುಲ್ ಕ್ಷಮೆಯಾಚನೆ

## ಸುಪ್ರೀಂಕೋರ್ಟ್ ತೀರ್ಪಿನಲ್ಲೇ ಹೇಳಿದೆ ಎಂದಿದ್ದ ಕಾಂಗ್ರೆಸ್ ಅಧ್ಯಕ್ಷ ಪ್ರಚಾರದ ಕಾವಿನಲ್ಲಿ ಹಾಗೆ ಹೇಳಿದೆ ಎಂದು ಇದೀಗ ಸಮಜಾಯಿಷಿ

ಕ.ಪ್ರ 23/4/19

ನವದೆಹಲಿ: ಪ್ರಧಾನಿ ಮೋದಿ ಅವರನ್ನು ಟೀಕಿಸುವ ಭರದಲ್ಲಿ, ಸುಪ್ರೀಂಕೋರ್ಟ್ ಆದೇಶವನ್ನೇ ತಿರುಚಿದ್ದ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ, ಈ ಕುರಿತು ಕ್ಷಮೆ ಯಾಚಿಸಿದ್ದಾರೆ. ಈ ಮೂಲಕ ಸಂಭವನೀಯ ನ್ಯಾಯಾಂಗ ನಿಂದನಾ ಪ್ರಕರಣದಿಂದ ಪಾರಾಗಿದ್ದಾರೆ. ತಮ್ಮ ವಿರುದ್ಧ ಸಲ್ಲಿಕೆಯಾದ ನ್ಯಾಯಾಂಗ ನಿಂದನೆ ಅರ್ಜಿಗೆ ಸೋಮವಾರ ವಕೀಲರ ಮೂಲಕ ಅಫಿಡವಿಟ್ ಸಲ್ಲಿಸಿದ ರಾಹುಲ್, ಪ್ರಚಾರದ ಕಾವಿನಲ್ಲಿ ಹಾಗೆ ಹೇಳಿಬಿಟ್ಟೆ ಎಂದು ಸ್ಪಷ್ಟನೆ ನೀಡಿದ್ದಾರೆ.



ಇದರ ಬೆನ್ನಲ್ಲೇ 'ರಾಹುಲ್ ಮೊದಲ ದರ್ಜೆಯ ಸುಳ್ಳುಗಾರ ಎಂಬುದು ಸಾಬೀತಾಗಿದೆ' ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ. ಅದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ರಾಹುಲ್ ಸುಪ್ರೀಂಕೋರ್ಟ್‌ಗೆ ನೀಡಿರುವ ಸ್ಪಷ್ಟನೆಯನ್ನು ಧರ್ಮನಿಂದನೆಯ ರೀತಿಯಲ್ಲಿ ಅಪವ್ಯಾಖ್ಯಾನ ಮಾಡಿರುವ ಬಿಜೆಪಿಯ ನಡೆಯೇ ನ್ಯಾಯಾಂಗ ನಿಂದನೆಯದ್ದಾಗಿದೆ ಎಂದು ಹೇಳಿದೆ. » 10

## ಪೌರತ್ವ ವಿವಾದ: ರಾಹುಲ್ ಗಾಂಧಿ ನಾಮಪತ್ರ ಸಿಂಧು

ಅಮೇಠಿ: ಪೌರತ್ವ ಹಾಗೂ ಶೈಕ್ಷಣಿಕ ಅರ್ಹತೆಯ ವಿವಾದಕ್ಕೆ ಸಿಲುಕಿದ್ದ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಅವರ ನಾಮಪತ್ರ ಕೊನೆಗೂ ಅಂಗೀಕಾರವಾಗಿದೆ. ತನ್ಮೂಲಕ ಸ್ವಕ್ಷೇತ್ರವಾದ ಉತ್ತರ ಪ್ರದೇಶದ ಅಮೇಠಿಯಿಂದ ಅವರು ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಇದ್ದ ಅಡ್ಡಿ ನಿವಾರಣೆಯಾದಂತಾಗಿದೆ. ವಿವರ » 7

# ರಾಹುಲ್ ಕ್ಷಮೆಯಾಚನೆ

ಕ.ಪ್ರ 23/4/19

« ಮೊದಲ ಪುಟದಿಂದ

**ಚೌಕಿದಾರ್ ಚೋರ್ ಹೈ ವಿವಾದ:** 'ಚೌಕೀದಾರ್ ನರೇಂದ್ರ ಮೋದಿ ಚೋರ್ ಹೈ' (ಕಾವಲುಗಾರ ನರೇಂದ್ರ ಮೋದಿ ಕಳ್ಳ) ಎಂದು ಸುಪ್ರೀಂಕೋರ್ಟ್ ರಫೇಲ್ ತೀರ್ಪಿನಲ್ಲಿ ಹೇಳಿದೆ ಎಂದು ರಾಹುಲ್ ತಮ್ಮ ಚುನಾವಣಾ ಪ್ರಚಾರ ಭಾಷಣದಲ್ಲಿ ಇತ್ತೀಚೆಗೆ ಹೇಳಿದ್ದರು. ಈ ಬಗ್ಗೆ ಏ.15ರಂದು ಸ್ವತಃ ಸ್ಪಷ್ಟನೆ ನೀಡಿದ್ದ ಸುಪ್ರೀಂಕೋರ್ಟ್, ರಾಹುಲ್ ಗಾಂಧಿ ಬಳಸಿರುವ ಪದಗಳನ್ನು ತಾನೆಲ್ಲೂ ತೀರ್ಪಿನಲ್ಲಿ ಬಳಸಿಲ್ಲ. ರಾಜಕಾರಣಿಗಳು ನ್ಯಾಯಾಂಗದ ಅಭಿಪ್ರಾಯವನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದನ್ನು ನಿಲ್ಲಿಸಬೇಕು ಎಂದು ಹೇಳಿತ್ತು. ಅದರ ಬೆನ್ನಲ್ಲೇ ಬಿಜೆಪಿ ಸಂಸದೆ ಹಾಗೂ ವಕೀಲೆ ಮೀನಾಕ್ಷಿ ಲೇಖಿ ಅವರು ರಾಹುಲ್ ವಿರುದ್ಧ ನ್ಯಾಯಾಂಗ ನಿಂದನೆ ದೂರು ದಾಖಲಿಸಿಕೊಳ್ಳಬೇಕೆಂದು ಸುಪ್ರೀಂಕೋರ್ಟ್‌ಗೆ ಹೋಗಿದ್ದರು. ಅದರ ವಿಚಾರಣೆಯನ್ನು ಏ.23ಕ್ಕೆ ನಿಗದಿಪಡಿಸಿದ್ದ ನ್ಯಾಯಪೀಠ, ಏ.22ರಂದು ಈ ಬಗ್ಗೆ ರಾಹುಲ್ ಸ್ಪಷ್ಟನೆ ನೀಡಬೇಕು ಎಂದು ಸೂಚಿಸಿತ್ತು.

ಅದರಂತೆ ಸೋಮವಾರ ಅಫಿಡವಿಟ್ ಸಲ್ಲಿಸಿದ ರಾಹುಲ್, 'ಚುನಾವಣಾ ಪ್ರಚಾರದ ಬಿಸಿಯಲ್ಲಿ ಹಾಗೆ ಹೇಳಿದೆ. ಸುಪ್ರೀಂಕೋರ್ಟ್‌ನ ಘನತೆಗೆ ಧಕ್ಕೆ ತರುವ ಯಾವ ಉದ್ದೇಶವೂ ನನಗಿಲ್ಲ. ಇದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಅವರೆ, ಸ್ವತಃ ಪ್ರಧಾನಿಯೇ ರಫೇಲ್ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಭಾಷಣಗಳಲ್ಲಿ ಬಳಸಿಕೊಂಡು 'ನಮಗೆ ಕ್ಲೀನ್‌ಚಿಟ್ ಸಿಕ್ಕಿದೆ' ಎಂದು ಹೇಳಿಕೊಳ್ಳುತ್ತಿದ್ದಾರೆ' ಎಂದರು.

ರಾಹುಲ್ ಸುಳ್ಳು ಹೇಳಿದ್ದು ಈ ಮೂಲಕ ಸಾಬೀತಾಗಿದ್ದು, ಅವರು ದೇಶದ ಕ್ಷಮೆ ಕೇಳಬೇಕು ಎಂದು ಬಿಜೆಪಿ ಆಗ್ರಹಿಸಿದೆ.

2